**ಸಾಕ್ಷಿಯನ್ನು ದಿನಾಂಕಃ 25.07.2025 ರಂದು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.**

**ಮುಖ್ಯ ವಿಚಾರಣೆಃ ವಾದಿ ಪರ ಶ್ರೀ ಎಸ್ ಜೆ ವಕೀಲರಿಂದಃ**

ನಾನು ಈ ದಿನ ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು, ಅದರಲ್ಲಿರುವ ಅಂಶಗಳು ಮತ್ತು ಸಂಗತಿಗಳು ಸತ್ಯವಾಗಿರುತ್ತದೆ ಎಂದು ಪ್ರಮಾಣೀಕರಿಸುತ್ತೇನೆ.

ನಾನು ಈಗ ನಿಪಿಃ2 ರ ದಾಖಲೆ ನೋಡುತ್ತಿದ್ದು ಅದು ಪ್ರತಿವಾದಿಯು ವಾದಿಗೆ ಬರೆದುಕೊಟ್ಟ ಕ್ರಯದ ಕರಾರು ಪತ್ರ ಆಗಿದ್ದು ಅದರಲ್ಲಿ ಅವರಿಬ್ಬರೂ ಸಹಿ ಮಾಡಿದ್ದು, ನಾನು ಪತ್ರ ಬರಹಗಾರನಾಗಿ ಸಹಿ ಮಾಡಿರುತ್ತೇನೆ. ಈಗ ನಾನು ನೋಡುತ್ತಿರುವ ದಾಖಲೆಯಲ್ಲಿ ವಾದಿ ಮತ್ತು ಪ್ರತಿವಾದಿಯ ಸಹಿ ಇರುತ್ತವೆ. ಸದರಿ ಸಹಿಗಳನ್ನು ನಿಪಿಃ2(ಎ)ಮತ್ತು (ಬಿ) ಎಂದು ಗುರುತಿಸಲಾಯಿತು.ಈಗ ನಾನು ಸದರಿ ದಾಖಲೆಯಲ್ಲಿರುವ ನನ್ನ ಸಹಿಯನ್ನು ನೋಡಿ ಗುರುತಿಸುತ್ತಿದ್ದೇನೆ. ಸಾಕ್ಷಿಯು ಗುರುತಿಸಿದ ಸಾಕ್ಷಿಯ ಸಹಿಯನ್ನು ನಿಪಿಃ2(ಸಿ) ಎಂದು ಗುರುತಿಸಲಾಯಿತು. ನಿಪಿಃ2 ಕ್ಕೆ ಸಾಕ್ಷಿದಾರರಾಗಿ ಶಿವಲಿಂಗಯ್ಯ ಮತ್ತು ಶಕುಂತಲ ಸಹಿ ಮಾಡಿದ್ದು, ಈಗ ನಾನು ಅವರ ಸಹಿಗಳನ್ನು ನೋಡಿ ಗುರುತಿಸುತ್ತಿದ್ದೇನೆ. ಸದರಿ ಸಹಿಗಳನ್ನು ನಿಪಿಃ2(ಡಿ) ಮತ್ತು (ಇ) ಎಂದು ಗುರುತಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿ ಪರ ಶ್ರೀ ಜಿ ಎನ್ ಎಸ್ ವಕೀಲರು ಪಾಟೀ ಸವಾಲಿಗಾಗಿ ಸಮಯ ಕೋರಿದ್ದು ಸಮಯ ನೀಡಿ ಮುಂದೂಡಲಾಯಿತು.**

ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.

ಓ. ಹೇ.ಕೇ. ಸರಿ ಇದೆ

ಅಪರ ಹಿರಿಯ ಸಿವಿಲ್ ನ್ಯಾಯಾಧೀಶರು,
ಮದ್ದೂರು.